854 (1422) ಶ್ರೀ ಪಾಟೀಲ್ ಬಿ.ಆರ್. (ಆಳಂದ): ಮಾನ್ಯ ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ತಾಲ್ಲೂಕು ಮಟ್ಟದಲ್ಲಿ ನಡೆಯುವ ಕೆಡಿಪಿ ಸಭೆಗೆ ಯಾವ ಇಲಾಖಾ ಅಧಿಕಾರಿ ವರ್ಗದವರು ಹಾಜರಾಗಬೇಕೆಂಬುದರ ಬಗ್ಗೆ ಸರ್ಕಾರ ಸುತ್ತೋಲೆಯನ್ನು ಹೊರಡಿಸಿದೆಯೇ; ಸುತ್ತೋಲೆ ಪ್ರತಿಯನ್ನು ಒದಗಿಸುವುದು;

ಆ) ಕೆಡಿಪಿ ಸಭೆಗೆ ಹಾಜರಾಗದೆ ಇರುವ ಅಧಿಕಾರಿಗಳ ಬಗ್ಗೆ ಸರ್ಕಾರ ಗಮನಿಸಿದೆಯೇ;

ಇ) ಹಾಜರಾಗದ ಅಧಿಕಾರಿಗಳ ಬಗ್ಗೆ ದೂರು ಕೊಟ್ಟರೂ ಯವ ಕ್ರಮ ಕೈಗೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಈ ಬಗ್ಗೆ ತೆಗೆದುಕೊಂಡ ಕ್ರಮವೇನು?

ಶ್ರೀ ರಾಮಚಂದ್ರಗೌಡ (ಯೋಜನಾ ಸಚಿವರು):

ಅ) ಹೌದು, ಸುತ್ತೋಲೆ ಪ್ರತಿಯನ್ನು ಲಗತ್ತಿಸಲಾಗಿದೆ.

ಆ) ಹೌದು

ಇ) ಇಲ್ಲ. ಸುತ್ತೋಲೆ ಸಂಖ್ಯೆ: ಪಿಡಿ 5 ಐಎಂಎಂ 2002 ದಿನಾಂಕ:15.2.2002 ರನ್ವಯ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಥವಾ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳನ್ನು ನಿಯಂತ್ರಿಸುವ ಮೇಲಾಧಿಕಾರಿಗಳು ಗೈರು ಹಾಜರಿಯಾದ ಅಧಿಕಾರಿಗಳ ಬಗ್ಗೆ ನಿಯಮಾನುಸಾರ ಶಿಸ್ತಿನ ಕ್ರಮವನ್ನು ಜರುಗಿಸಲು ಅಧಿಕಾರವನ್ನು ನೀಡಲಾಗಿದೆ.

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ, ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ.

ಓದಲಾಗಿದೆ

1. ಸರ್ಕಾರಿ ಆದೇಶ ಸಂಖ್ಯೆ ಪಿಡಿ 212 ಪಿಎಂಎಂ 87, ದಿನಾಂಕ:12.10.1987.
2. ಸರ್ಕಾರಿ ಆದೇಶ ಸಂಖ್ಯೆ ಪಿಡಿ 37 ಸಿಇಪಿ 89, ದಿನಾಂಕ:3.1.1990.
3. ಸರ್ಕಾರಿ ಆದೇಶ ಸಂಖ್ಯೆ ಪಿಡಿ 34 ಸಿಇಪಿ 89, ದಿನಾಂಕ: 26.4.1990.
4. ಸರ್ಕಾರಿ ಆದೇಶ ಸಂಖ್ಯೆ ಪಿಡಿ 235 ಸಿಒಪಿ 93, 87, ದಿನಾಂಕ: 12.2.1994.
5. ಸರ್ಕಾರಿ ಆದೇಶ ಸಂಖ್ಯೆ ಪಿಡಿ 309 ಪಿಟಿಪಿ 94, ದಿನಾಂಕ: 19.12.1994.

ಪ್ರಸ್ತಾವನೆ:

ಮೇಲೆ ಕ್ರಮಸಂಖ್ಯೆ (1) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮದ (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿ ಅನುಷ್ಠಾನದ ಜಿಲ್ಲಾಮಟ್ಟದ ಮತ್ತು ತಾಲ್ಲೂಕುಮಟ್ಟದ ಸಮಿತಿಗಳನ್ನು ಪುನರ್ ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (2) ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮಗಳನ್ನೊಳಗೊಂಡಂತೆ) ಕರ್ನಾಟಕ 20 ಅಂಶ ಕಾರ್ಯಕ್ರಮವೆಂದು ಪುನರ್ ನಾಮಾಂಕಿತಗೊಳಿಸಿತ್ತು. ಮೇಲೆ ಕ್ರಮಸಂಖ್ಯೆ (3)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕುಮಟ್ಟದ ಸಮಿತಿಗಳನ್ನು ಪರಿಷ್ಕರಿಸಿ ರಚಿಸುವ ಬಗ್ಗೆ ಮತ್ತು ರಾಜ್ಯಮಟ್ಟದ ಉನ್ನತಾಧಿಕಾರ ಸಮಿತಿಯನ್ನು ರಚಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು ಮೇಲೆ ಕ್ರಮಸಂಖ್ಯೆ (4)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಲ್ಲಿ ಸದಸ್ಯತ್ವವನ್ನು ವಿಸ್ತರಿಸುವ ಬಗ್ಗೆ ಆದೇಶವನ್ನು ಹೊರಡಿಸಿತ್ತು. ಮೇಲೆ ಕ್ರಮಸಂಖ್ಯೆ (5)ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶದಲ್ಲಿ ಸರ್ಕಾರವು ಶಾಸಕರುಗಳು ಮತ್ತು ಅಧಿಕಾರೇತರ ಸದಸ್ಯರುಗಳಿರುವ ಜಿಲ್ಲಾ ಉಸ್ತುವಾರಿ ಸಚಿವರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ಜಿಲ್ಲಾ ಮಟ್ಟದ ಸಮಿತಿಗಳ ಮತ್ತು ತಾಲ್ಲೂಕು ಕೇಂದ್ರ ಕಾರ್ಯಸ್ಥಾನದ ವಿಧಾನ ಸಭಾ ಚುನಾವಣಾ ಕ್ಷೇತ್ರದ ವಿಧಾನ ಸಭಾ ಸದಸ್ಯರು ಅಧ್ಯಕ್ಷರಾಗಿರುವ ಕರ್ನಾಟಕ 20 ಅಂಶ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಎಲ್ಲಾ ತಾಲ್ಲೂಕು ಮಟ್ಟದ ಸಮಿತಿಗಳ ಕಾರ್ಯ ನಿರ್ವಹಣೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸ್ಥಗಿತಗೊಳಿಸಿತ್ತು.

2. ಸರ್ಕಾರವು ಈ ವಿಷಯವನ್ನು ಪರಿಗಣಿಸಿ ವಿವಿಧ ಹಂತದ ಪರಿಶೀಲನೆಯಲ್ಲಿ 20 ಅಂಶ ಕಾರ್ಯಕ್ರಮ ಮಾತ್ರವಲ್ಲದೆ ಇತರೆ ಮುಖ್ಯವಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅಳವಡಿಸಲು ತೀರ್ಮಾನಿಸಿದೆ.

3. ಆದ್ದರಿಂದ ಸರ್ಕಾರವು ಮೇಲಿನ ಕ್ರಮಸಂಖ್ಯೆ 1 ರಿಂದ 5ರಲ್ಲಿ ಉಲ್ಲೇಖಿಸಿರುವ ಸರ್ಕಾರಿ ಆದೇಶಗಳನ್ನು ರದ್ದುಗೊಳಿಸಿ ಕೆಳಕಂಡ ಆದೇಶವನ್ನು ಹೊರಡಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ : ಪಿಡಿ 309 ಪಿಟಪಿ 94.
ಬೆಂಗಳೂರು : ದಿನಾಂಕ : 7ನೇ ಆಗಸ್ಟ್ 1995.

ಕರ್ನಾಟಕ 20 ಅಂಶ ಕಾರ್ಯಕ್ರಮವನ್ನು ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮ (20 ಅಂಶ ಕಾರ್ಯಕ್ರಮವು ಸೇರಿದಂತೆ) ಎಂದು ಪುನರ್ ನಾಮಾಂಕಿತಗೊಳಿಸಲಾಗಿದೆ.

2. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20) ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದಲ್ಲಿ, ಜಿಲ್ಲಾಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಅನುಕ್ರಮವಾಗಿ ಕೆಳಕಂಡಂತೆ ರಚಿಸಿರುವ ಸಮಿತಿಗಳು ವಿವಿಧ ಹಂತಗಳಲ್ಲಿ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆ ಪರಿಶೀಲನೆ ನಡೆಸತಕ್ಕದ್ದು. ಈ ಸಮಿತಿಗಳ ಸ್ವರೂಪವು ಅವುಗಳ ಮುಂದೆ ತೋರಿಸಿರುವಂತೆ ಇರುತ್ತದೆ:

ಅ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ಉನ್ನತ ಅಧಿಕಾರ ಸಮಿತಿ.

i)	ಮುಖ್ಯಮಂತ್ರಿಗಳು	ಅಧ್ಯಕ್ಷರು
ii)	ಹಣಕಾಸು ಮತ್ತು ಯೋಜನಾ ಸಚಿವರು	ಉಪಾಧ್ಯಕ್ಷರು.
iii)	ಮುಖ್ಯಮಂತ್ರಿಗಳು ನಾಮನಿರ್ದೇಶನ ಮಾಡುವ ಸಚಿವರುಗಳು	ಸದಸ್ಯರುಗಳು.
iv)	ಸರ್ಕಾರದ ಮುಖ್ಯ ಕಾರ್ಯದರ್ಶಿ	ಸದಸ್ಯರು.
v)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಸದಸ್ಯರು
vi)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು
vii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು
viii)	ಸರ್ಕಾರದ ಕಾರ್ಯದರ್ಶಿ ಯೋಜನಾ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯ ಕಾರ್ಯದರ್ಶಿ
ix)	ಸಂಬಂಧಪಟ್ಟ ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು : ಕಾರ್ಯದರ್ಶಿಗಳು,	ಆಹ್ವಾನಿತರು.

	ಇಲಾಖಾ ಮುಖ್ಯಸ್ಥರುಗಳು ಮತ್ತು ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.	

ಆ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.

i)	ಜಿಲ್ಲಾ ಉಸ್ತುವಾರಿ ಸಚಿವರು	ಅಧ್ಯಕ್ಷರು
ii)	ಅಧ್ಯಕ್ಷರು, ಜಿಲ್ಲಾ ಪಂಚಾಯತ್	ಉಪಾಧ್ಯಕ್ಷರು.
iii)	ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ; ಜಿಲ್ಲೆಯಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯ ಸಭೆ ಮತ್ತು ಲೋಕ ಸಭೆ)	ಸದಸ್ಯರುಗಳು.
iv)	ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್	ಸದಸ್ಯರು
v)	ಜಿಲ್ಲೆಯಲ್ಲಿನ ತಾಲ್ಲೂಕುಗಳನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರುಗಳು	ಸದಸ್ಯರುಗಳು.
vi)	ಜಿಲ್ಲೆಯಲ್ಲಿ ವಾಸವಾಗಿರುವ : ಜಿಲ್ಲೆಯನ್ನು : ಜಿಲ್ಲೆಯ ಭಾಗಗಳನ್ನು ಪ್ರತಿನಿಧಿಸುವ ವಿಧಾನ ಪರಿಷತ್ ಸದಸ್ಯರುಗಳು	ಸದಸ್ಯರುಗಳು.
vii)	ಜಿಲ್ಲಾ ಪಂಚಾಯತಿಗಳ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು.	ಸದಸ್ಯರುಗಳು.
viii)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ	ಸದಸ್ಯರು.
ix)	ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು.
x)	ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು.

xi)	ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾ ಕರ್ತರ ಒಬ್ಬ ಪ್ರತಿನಿಧಿ.	ಸದಸ್ಯರು
xii)	ಒಬ್ಬ ಮಹಿಳಾ ಪ್ರತಿನಿಧಿ	ಸದಸ್ಯರು
xiii)	ಕರ್ನಾಟಕ ರಾಜ್ಯ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪ್ರತಿನಿಧಿ (ಪ್ರತಿನಿಧಿಯನ್ನು ಬ್ಯಾಂಕ್ ನಾಮನಿರ್ದೇಶನ ಮಾಡುವುದು)	ಸದಸ್ಯರು.
xiv)	ಡಿ.ಸಿ.ಸಿ.ಬ್ಯಾಂಕ್ ಅಧ್ಯಕ್ಷರು	ಸದಸ್ಯರು.
xv)	ಜಿಲ್ಲೆಯ ಎಲ್ಲಾ ಉಪ ಜಿಲ್ಲಾಧಿಕಾರಿ	ಸದಸ್ಯರು.
xvi)	ಜಿಲ್ಲೆಯ ಎಲ್ಲಾ ಉಪ ವಿಭಾಗಾಧಿಕಾರಿಗಳು	ಸದಸ್ಯರುಗಳು.
xvii)	ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯರ್	ಸದಸ್ಯ ಕಾರ್ಯದರ್ಶಿ.
xviii)	ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು.
xix)	ಎಲ್ಲಾ ಸಂಬಂಧಪಟ್ಟ ಸಹಕಾರಿ ಸಂಸ್ಥೆಗಳ, ಸಾರ್ವಜನಿಕ ವಲಯ ಉದ್ಯಮಗಳ ಮತ್ತು ಶಾಸನಬದ್ಧ ನಿಕಾಯಗಳ ಜಿಲ್ಲಾಮಟ್ಟದ ಅಧಿಕಾರಿಗಳು	ಆಹ್ವಾನಿತರು.
xx)	ಲೀಡ್ ಬ್ಯಾಂಕ್ ಅಧಿಕಾರಿ.	ಆಹ್ವಾನಿತರು.

ಇ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ತ್ರೈಮಾಸಿಕ ಪರಿಶೀಲನಾ ಸಮಿತಿ.

i)	ತಾಲ್ಲೂಕಿನಲ್ಲಿ ಅತಿ ಹೆಚ್ಚು ಕ್ಷೇತ್ರವನ್ನು ಪ್ರತಿನಿಧಿಸುವ ವಿಧಾನ ಸಭಾ ಸದಸ್ಯರು	ಅಧ್ಯಕ್ಷರು
ii)	ತಾಲ್ಲೂಕಿನ ಉಳಿದ ಭಾಗಗಳನ್ನು ಪ್ರತಿನಿಧಿಸುವ ವಿಧಾನಸಭಾ ಸದಸ್ಯರುಗಳು	ಸಹ–ಅಧ್ಯಕ್ಷರುಗಳು.

iii)	ತಾಲ್ಲೂಕನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ತಾಲ್ಲೂಕಿನಲ್ಲಿ ವಸವಾಗಿರುವ ವಿಧಾನ ಪರಿಷತ್ತಿನ ಸದಸ್ಯರುಗಳು	ಸದಸ್ಯರುಗಳು
iv)	ತಾಲ್ಲೂಕನ್ನು : ತಾಲ್ಲೂಕಿನ ಭಾಗಗಳನ್ನು ಪ್ರತಿನಿಧಿಸುವ ತಾಲ್ಲೂಕಿನಲ್ಲಿ ವಾಸವಾಗಿರುವ ಸಂಸತ್ ಸದಸ್ಯರುಗಳು (ರಾಜ್ಯಸಭೆ ಮತ್ತು ಲೋಕಸಭೆ)	ಸದಸ್ಯರುಗಳು
v)	ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಒಬ್ಬ ಪ್ರತಿನಿಧಿ	ಸದಸ್ಯರು
vi)	ಹಿಂದುಳಿದ ವರ್ಗದ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು
vii)	ಧಾರ್ಮಿಕ ಅಲ್ಪಸಂಖ್ಯಾತ ಕೋಮಿನ ಒಬ್ಬ ಪ್ರತಿನಿಧಿ	ಸದಸ್ಯರು
viii)	ಸಾಮಾನ್ಯ ವರ್ಗಕ್ಕೆ ಸೇರಿದ ಸಮಾಜ ಸೇವಾಕರ್ತರ ಇಬ್ಬರು ಪ್ರತಿನಿಧಿಗಳು	ಸದಸ್ಯರುಗಳು
ix)	ಒಬ್ಬ ಮಹಿಳಾ ಪ್ರತಿನಿಧಿ	ಸದಸ್ಯರು
x)	ಪಿಸಿಎಆರ್‌ಡಿ ಬ್ಯಾಂಕ್ ಅಧ್ಯಕ್ಷರು	ಸದಸ್ಯರು
xi)	ಉಪ ವಿಭಾಗಾಧಿಕಾರಿ (ತಮ್ಮ ಅಧಿಕಾರ ವ್ಯಾಪ್ತಿಯಲ್ಲಿನ ತಾಲ್ಲೂಕುಗಳಲ್ಲಿ ಒಂದೇ ದಿನ ಒಂದಕ್ಕಿಂತ ಹೆಚ್ಚು ಸಮಿತಿ ಸಭೆಗಳನ್ನು ಕರೆಯಲಾಗಿದ್ದರೆ ಯಾವುದೇ ತಾಲ್ಲೂಕು ಸಮಿತಿಯ ಸಭೆಯಲ್ಲಿ ಭಾಗವಹಿಸುವ ಆಯ್ಕೆಯ ಅವಕಾಶ ಉಪ ವಿಭಾಗಾಧಿಕಾರಿಯವರಿಗೆ ಇರುತ್ತದೆ)	ಸದಸ್ಯರು
xii)	ಟಿ.ಎ.ಪಿ.ಸಿ.ಎಂ.ಎಸ್. ಅಧ್ಯಕ್ಷರು	ಸದಸ್ಯರು
xiii)	ಡಿಸಿಸಿ ಬ್ಯಾಂಕಿನ ತಾಲ್ಲೂಕು ಮಟ್ಟದ ಪ್ರತಿನಿಧಿ	ಸದಸ್ಯರು
xiv)	ತಹಶೀಲ್ದಾರ್	ಸದಸ್ಯರು
xv)	ಕ್ಷೇತ್ರಾಭಿವೃದ್ಧಿ ಅಧಿಕಾರಿ	ಸದಸ್ಯರು

xvi)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್	ಸದಸ್ಯ ಕಾರ್ಯದರ್ಶಿ
xvii)	ಎಲ್ಲಾ ಸಂಬಂಧಪಟ್ಟ ಇಲಾಖೆಗಳ : ಸಾರ್ವಜನಿಕ ಉದ್ಯಮಗಳ: ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ: ತಾಲ್ಲೂಕು ಮಟ್ಟದ ಅಧಿಕಾರಿಗಳು	ಆಹ್ವಾನಿತರು

3. ಇದಲ್ಲದೆ, ಕೆಳಕಂಡಂತೆ ರಚಿಸಿರುವ ಸಮಿತಿಗಳು ಅನುಕ್ರಮವಾಗಿ ರಾಜ್ಯಮಟ್ಟದಲ್ಲಿ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ವಿವಿಧ ಹಂತದ ಪರಿಶೀಲನೆಯನ್ನು ಪ್ರತಿ ತಿಂಗಳೂ ನಡೆಸತಕ್ಕದ್ದು. ಈ ಸಮಿತಿಗಳ ಸ್ವರೂಪವು ಅವುಗಳ ಮುಂದೆ ತೋರಿಸಿರುವಂತೆ ಇರುತ್ತದೆ.

ಅ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ರಾಜ್ಯ ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.

i)	ಸರ್ಕಾರದ ಮುಖ್ಯ ಕಾರ್ಯದರ್ಶಿ	ಅಧ್ಯಕ್ಷರು
ii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ	ಸದಸ್ಯರು
iii)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಅಭಿವೃದ್ಧಿ ಆಯುಕ್ತರು	ಸದಸ್ಯರು
iv)	ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಮತ್ತು ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ	ಸದಸ್ಯರು
v)	ಸಂಬಂಧಪಟ್ಟ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು: ಕಾರ್ಯದರ್ಶಿಗಳು	ಸದಸ್ಯರುಗಳು
vi)	ನಿರ್ದೇಶಕರು, ಪಿಎಂಐ ವಿಭಾಗ, ಯೋಜನಾ, ಸಾಂಸ್ಥಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ	ಸದಸ್ಯ ಕಾರ್ಯದರ್ಶಿ

vii)	ಎಲ್ಲಾ ಸಂಬಂಧಪಟ್ಟ ಇಲಾಖಾ ಮುಖ್ಯಸ್ಥರುಗಳು: ಸಾರ್ವಜನಿಕ ವಲಯದ ಉದ್ಯಮಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು	ಆಹ್ವಾನಿತರು

ಆ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.

i)	ಅಧ್ಯಕ್ಷರು, ಜಿಲ್ಲಾ ಪಂಚಾಯತ್	ಅಧ್ಯಕ್ಷರು
ii)	ಉಪಾಧ್ಯಕ್ಷರು, ಜಿಲ್ಲಾ ಪಂಚಾಯತ್	ಉಪಾಧ್ಯಕ್ಷರು
iii)	ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯರು
iv)	ಜಿಲ್ಲಾಧಿಕಾರಿ	ಸದಸ್ಯರು
v)	ಜಿಲ್ಲಾ ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು	ಸದಸ್ಯರುಗಳು
vi)	ಮುಖ್ಯ ಯೋಜನಾ ಅಧಿಕಾರಿ, ಜಿಲ್ಲಾ ಪಂಚಾಯತ್	ಸದಸ್ಯ ಕಾರ್ಯದರ್ಶಿ
vii)	ಎಲ್ಲಾ ಸಂಬಂಧಪಟ್ಟ ಇಲಾಖೆಗಳ ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು
viii)	ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯ ಉದ್ಯಮಗಳ : ಸಹಕಾರಿ ಸಂಸ್ಥೆಗಳ ಮತ್ತು ಶಾಸನಬದ್ಧ ನಿಕಾಯಗಳ: ಜಿಲ್ಲಾ ಮಟ್ಟದ ಮುಖ್ಯಸ್ಥರುಗಳು	ಆಹ್ವಾನಿತರು
ix)	ಲೀಡ್ ಬ್ಯಾಂಕ್ ಅಧಿಕಾರಿ	ಆಹ್ವಾನಿತರು

ಇ. ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮವನ್ನು (20 ಅಂಶ ಕಾರ್ಯಕ್ರಮವು ಸೇರಿದಂತೆ) ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ತಾಲ್ಲೂಕು ಮಟ್ಟದ ಮಾಸಿಕ ಪರಿಶೀಲನಾ ಸಮಿತಿ.

i)	ಅಧ್ಯಕ್ಷರು, ತಾಲ್ಲೂಕು ಪಂಚಾಯತ್	ಅಧ್ಯಕ್ಷರು
ii)	ಉಪಾಧ್ಯಕ್ಷರು, ತಾಲ್ಲೂಕು ಪಂಚಾಯತ್	ಉಪಾಧ್ಯಕ್ಷರು
iii)	ತಹಶೀಲ್ದಾರ್	ಸದಸ್ಯರು
iv)	ತಾಲ್ಲೂಕು ಪಂಚಾಯತಿಯ ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳು	ಸದಸ್ಯರುಗಳು
v)	ಕ್ಷೇತ್ರಾಭಿವೃದ್ಧಿ ಅಧಿಕಾರಿ	ಸದಸ್ಯರು
vi)	ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕ್ ಪಂಚಾಯತ್	ಸದಸ್ಯ ಕಾರ್ಯದರ್ಶಿ
vii)	ಎಲ್ಲಾ ಸಂಬಂಧಪಟ್ಟ ಅಭಿವೃದ್ಧಿ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು	ಆಹ್ವಾನಿತರು.
viii)	ಎಲ್ಲಾ ಸಂಬಂಧಪಟ್ಟ ಸಾರ್ವಜನಿಕ ವಲಯ ಉದ್ಯಮಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು:ಶಾಸನಬದ್ಧ ನಿಕಾಯಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು	ಆಹ್ವಾನಿತರು.

4. ಕಂಡಿಕೆ 3(ಇ) ನಲ್ಲಿ ರಚಿಸಿರುವ ತಾಲ್ಲೂಕುಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 5ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 5ನೇ ತಾರೀಖು ರಜೆಯ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ತಾಲ್ಲೂಕು ಪಂಚಾಯತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ ತಾಲ್ಲೂಕು ಪಂಚಾಯತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಮಿತಿಯು ಸಭೆ ನಡೆಸತಕ್ಕದ್ದು. ಈ ಇಬ್ಬರ ಗೈರು ಹಾಜರಿಯಲ್ಲಿ ತಾಲ್ಲೂಕು

ಪಂಚಾಯತಿಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಸತಕ್ಕದ್ದು.

5. ಕಂಡಿಕೆ 3(ಅ)ನಲ್ಲಿ ರಚಿಸಿರುವ ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳೂ 11ನೇ ತಾರೀಖು ಸಭೆ ಸೇರತಕ್ಕದ್ದು. ಒಂದು ವೇಳೆ 11ನೇ ತಾರೀಖು ರಜಾ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು. ಜಿಲ್ಲಾ ಪಂಚಾಯತಿಯ ಅಧ್ಯಕ್ಷರ ಗೈರು ಹಾಜರಿಯಲ್ಲಿ, ಜಿಲ್ಲಾ ಪಂಚಾಯಿತಿಯ ಉಪಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಸಭೆ ಸೇರತಕ್ಕದ್ದು. ಈ ಇಬ್ಬರು ಗೈರು ಹಾಜರಿಯಲ್ಲಿ ಜಿಲ್ಲಾ ಪಂಚಾಯಿತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರ ಅಧ್ಯಕ್ಷತೆಯಲ್ಲಿ ಸಮಿತಿಯ ಸಭೆ ನಡೆಸತಕ್ಕದ್ದು.

6. ಅಧಿಕಾರೇತರ ಸದಸ್ಯರುಗಳ ಪ್ರಯಾಣ ಭತ್ಯೆಗಳನ್ನು ಆರ್ಥಿಕ ಇಲಾಖೆಯು ಹೊರಡಿಸಿರುವ ಸರ್ಕಾರಿ ಆದೇಶ ಸಂ:ಎಫ್‌ಡಿ 18 ಎಸ್‌ಆರ್‌ಎಸ್ 94, ದಿನಾಂಕ: 30.12.94ರ ಅನುಸಾರವಾಗಿ ನಿರ್ಧರಿಸುವುದು. ಈಗಿನಂತೆಯೇ ಪ್ರಯಾಣ ಭತ್ಯೆಗಳನ್ನು ಎಲ್ಲಾ ಜಿಲ್ಲಾ ಪಂಚಾಯಿತಿಗಳು, ಜಿಲ್ಲಾ ಪಂಚಾಯತ್ ನಿಧಿಯಿಂದ ಭರಿಸುವುದು ಮುಂದುವರಿಯುತ್ತದೆ.

7. ಕರ್ನಾಟಕ 20 ಅಂಶಗಳ ಕಾರ್ಯಕ್ರಮದ ಪರಿಣಾಮಕಾರಿ ಅನುಷ್ಠಾನದ ಜಿಲ್ಲಾ ಮಟ್ಟದ ಮತ್ತು ತಾಲ್ಲೂಕು ಮಟ್ಟದ ಸಮಿತಿಗಳಿಗೆ ಸರ್ಕಾರಿ ಆದೇಶ ಸಂ:ಪಿಡಿ 34 ಸಿಇಪಿ 89, ದಿನಾಂಕ: 26.4.90 ಮತ್ತು ಸರ್ಕಾರಿ ಆದೇಶ ಸಂ:ಪಿಡಿ 235 ಸಿಒಪಿ 93, ದಿನಾಂಕ: 21.2.94ರಲ್ಲಿ 19.12.94ರವರೆಗೆ ಹೊರಡಿಸಿದ ಆದೇಶಗಳಲ್ಲಿ ಮಾಡಿದ ಅಧಿಕಾರೇತರ ಸದಸ್ಯರುಗಳ ನಾಮನಿರ್ದೇಶನವನ್ನು ರದ್ದುಪಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಜಿ.ವಿಮಲ

ಸರ್ಕಾರದ ಅಧೀನ ಕಾರ್ಯದರ್ಶಿ-2

ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.